[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 1247/2023**

ಪಿಡ್ಲ್ಯೂಃ 1 ಸಿಡ್ಲ್ಯೂಃ 1

ಸಾಕ್ಷಿದಾರಳ ಹೆಸರು : ಸುಮಿತ್ರಾ ಪೂಜಾರ್ತಿ

ಗಂಡನ ಹೆಸರು : ಷಣ್ಮುಗ

ಪ್ರಾಯ : 55 ವರ್ಷ

ಉದ್ಯೋಗ : ಗೃಹಿಣಿ

ವಾಸ : ಕುಂಟಾಡಿ

ದಿನಾಂಕ 04.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಚಾಸಾ-2 ಮಗ, ಚಾಸಾ-3 ಸೊಸೆ, ಚಾಸಾ-4 ಮತ್ತು 5 ನೆರೆಕರೆಯವರು. 1 ನೇ ಆರೋಪಿಯನ್ನು ನೋಡಿರುತ್ತೇನೆ. 2 ನೇ ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ವಿ ಸಿ ಮುಖಾಂತರ ನೋಡಿ ಆತನನ್ನು ನಮ್ಮ ಮನೆಗೆ ಕರೆದುಕೊಂಡು ಬಂದ ದಿನ ನಾನು ಮನೆಯಲ್ಲಿ ಇರಲಿಲ್ಲ.

2. ನಾನು , ಚಾಸಾ-2 ಮತ್ತು 3 ರವರೊಂದಿಗೆ ವಾಸವಾಗಿದ್ದೇನೆ. ದಿಃ20.07.2021 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಚಾಸಾ-2 ರವರು ಚಾಸಾ-3 ರವರನ್ನು ಕಿನ್ನಿಗೊಳಿಯಿಂದ ವಾಪಸ್ಸು ಮನೆಗೆ ಕರೆದುಕೊಂಡು ಬರಲು ಹೋಗಿದ್ದರು ಮತ್ತು ನಾನು ಆ ಸಮಯದಲ್ಲಿ ಬಟ್ಟೆ ತೊಳೆಯಲು ಮನೆ ಪಕ್ಕದ ತೋಡಿಗೆ ಮನೆಗೆ ಬೀಗ ಹಾಕಿ ಹೋಗಿದ್ದೆ. ವಾಪಸ್ಸು ಬಂದು ಮನೆಯ ಬೀಗ ತೆಗೆಯುವಾಗ ಚಿಲಕಕ್ಕೆ ಸಿಕ್ಕಿಸುವ ಬೀಗದ ಕೊಂಡಿ ಬಿದ್ದು

ಹೋಗಿತ್ತು. ನಂತರ ಸದ್ರಿ ಬೀಗದ ಕೊಂಡಿಯನ್ನು ತೆಗೆದುಕೊಂಡು ಒಳಗೆ ಹೋದೆ. ಸ್ವಲ್ಪ ಸಮಯದ ನಂತರ ಚಾಸಾ-2 ಮತ್ತು 3 ಬಂದರು. ಅವರಿಗೆ ಸದ್ರಿ ವಿಷಯವನ್ನು ತಿಳಿಸಿದೆ ಮತ್ತು ಅವರು ಕೂಡಲೇ ಅವರ ಕೋಣೆಗೆ ಹೋಗಿ ಕಾಪಾಟಿನಲ್ಲಿದ್ದ ಚಿನ್ನಾಭರಣ ಇದೆಯಾ ಎಂದು ನೋಡಿದರು. ಆಗ ಒಂದು ಚಿನ್ನದ ಹಾರ, ಒಂದು ಕೈ ಬಳೆ , ಕಿವಿ ಬೆಂಡೋಲೆ, ಮಗುವಿನ ಉಂಗುರ, ಕರಿಮಣಿ ಸರ ಮತ್ತು ಬಂಗಾರದ ಉಂಗುರ ಕಳುವಾಗಿತ್ತು. ಇನ್ನೊಂದು ಕೋಣೆಯಲ್ಲಿ ಇದ್ದಂತಹ ಬಂಗಾರಕ್ಕೆ ಏನು ಆಗಿರಲಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಅದೇ ದಿನ ದೂರು ನೀಡಿರುತ್ತೇನೆ. ಈಗ ನೋಡಿದ ದಾಖಲೆಯು ನಾನು ನೀಡಿದ ದೂರು ಮತ್ತು ಅದರಲ್ಲಿರುವ ಸಹಿ ನನ್ನದು. ಸದ್ರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಪೊಲೀಸರು ನಮ್ಮ ಮನೆಗೆ ಬಂದಿದ್ದರು. ನಾನು ತೋರಿಸಿಕೊಟ್ಟಂತೆ ಪೊಲೀಸರು ಸ್ಥಳ ಮಹಜರು ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-6 ಮತ್ತು 7 ಇದ್ದರು. ತುಂಡಾಗಿ ಬಿದ್ದ ಬಾಗಿಲಿನ ಚಿಲಕದಕೊಂಡಿ ಮತ್ತು 2 ಸಣ್ಣ ಮೊಳೆಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರು ಮತ್ತು ನಕ್ಷೆಗೆ ನನ್ನ ಸಹಿಯನ್ನು ಪೊಲೀಸರು ಪಡೆದುಕೊಂಡಿರುತ್ತಾರೆ. ಈಗ ನಾನು ನೋಡಿದ ದಾಖಲೆಗಳಲ್ಲಿ ನನ್ನ ಸಹಿಗಳು ಇವೆ. ಸದ್ರಿ ದಾಖಲೆಯು ಸ್ಥಳ ಮಹಜರು ಆಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಸ್ಥಳದ ನಕ್ಷೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ನಾನು ನ್ಯಾಯಾಲಯದ ಮುಂದೆ ಬಾಗಿಲಿನ ಚಿಲಕಕೊಂಡಿ ಮತ್ತು 2 ಸಣ್ಣ ಮೊಳೆಯನ್ನು ನೋಡಿ ಗುರುತಿಸಿದ್ದೇನೆ. ಬಾಗಿಲಿನ ಚಿಲಕಕೊಂಡಿಯನ್ನು ಮು ಮಾ-1 ಎಂದು, ಸಣ್ಣ ಮೊಳೆಯನ್ನು ಮು ಮಾ-2 ಎಂದು ಗುರುತಿಸಲಾಯಿತು.

4. ಒಂದು ವರ್ಷ 10 ತಿಂಗಳ ನಂತರ ಪೊಲೀಸರು 1 ನೇ ಆರೋಪಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಆತನನ್ನು ವಿಚಾರಣೆ ಮಾಡಿರುತ್ತಾರೆ. 1 ನೇ ಅರೋಪಿಯನ್ನು ನಾನು ನೋಡಿದ ಬಗ್ಗೆ ಮತ್ತು ಘಟನೆಯ ಬಗ್ಗೆ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಕಳುವಾಗಿರುವ ಚಿನ್ನಾಭರಣಗಳಲ್ಲಿ 3 ಚಿನ್ನಾಭರಣಗಳನ್ನು

ಪೊಲೀಸರು ಸ್ವಾಧೀನಪಡಿಸಿಕೊಂಡಿದ್ದು ಅವುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ, ಯಾಕೆಂದರೆ ಅವು ನನ್ನ ಚಿನ್ನಾಭರಣಗಳು ಅಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

5. ಈ ಪ್ರಕರಣ ಪತ್ತೆಯಾಗದಪ್ರಕರಣ ಎಂದು ದಾಖಲಾದ ನಂತರ 1 ನೇ ಆರೋಪಿಯನ್ನು ಸ್ಥಳ ಮಹಜರಿಗೆ ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ದಿಃ20.07.2021 ರಂದು ಬೆಳಿಗ್ಗೆ 11.00 ಗಂಟೆಗೆ ನಮ್ಮ ಮನೆಗೆ ಬಂದು 1 ನೇ ಆರೋಪಿ ಮನೆಯಲ್ಲಿದ್ದ ಕೆಲವು ಚಿನಾನಭರಣಗಳನ್ನು ಕಳುವು ಮಾಡಿ ಬೆಂಗಳೂರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ. ಮಾರಾಟ ಮಾಡಿ ಬಂದ ಹಣ ಒಂದು ಲಕ್ಷ ವನ್ನು 1 ಮತ್ತು 2 ನೇ ಅರೋಪಿಗಳು ಹಂಚಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ನಮ್ಮ ಮನೆಯ ಬಾಗಿಲಿನ ಚಿಲಕವನ್ನು ತೆಗೆಯಲು ಬಳಸಿದ ರಾಡನ್ನು ಮಂಗಳೂರಿನ ಸಿಸಿಬಿ ಪೊಲೀಸರು ಸ್ವಾ ಧೀನಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಈಗ ನಾನು ನೋಡಿದ ಭಾವಚಿತ್ರ ದಲ್ಲಿ ಕಂಡು ಬರುವ ಚಿನ್ನಾಭರಣಗಳು ನಮ್ಮದಲ್ಲ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀಮತಿ ವಿ ಟಿ ಬಿ ವಕೀಲರಿಂದಃ

6. ಘಟನೆ ನಡೆದಿದೆ ಎಂದು ಹೇಳುವ ದಿನ ಆರೋಪಿಗಳನ್ನು ಸ್ಥಳದಲ್ಲಿ ನೋಡಿರುವುದಿಲ್ಲ. ಸಾಕ್ಷಿ ಮುಂದುವರಿದು ಆ ಸಮಯದಲ್ಲಿ ಮನೆಯಲ್ಲಿ ನಾವು ಯಾರು ಇರಲಿಲ್ಲ. ಪೊಲೀಸರು ನಮಗೆ ತಿಳಿಸಿದ ನಂತರ 1 ಮತ್ತು 2 ನೇ ಆರೋಪಿಗಳು ಕಳ್ಳತನ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. 2 ವರ್ಷಗಳ ನಂತರ ಪೊಲೀಸರು 1 ನೇ

ಆರೋಪಿಯನ್ನು ಕರೆದುಕೊಂಡು ಬಂದು ತಿಳಿಸಿದ ನಂತರ ನಮಗೆ ಗೊತ್ತಾಗಿರುತ್ತದೆ. ಅಮಾಯಕರನ್ನು ಕರೆದುಕೊಂಡು ಬಂದು ಆರೋಪಿಗಳು ಇವರೆ ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು ಬೆಳಿಗ್ಗೆ 10.00 ಗಂಟೆಗೆ ಬಟ್ಟೆ ತೊಳೆಯಲು ತೋಡಿಗೆ ಹೋಗಿರುತ್ತೇನೆ. ಸದ್ರಿ ತೋಡು ನಮ್ಮ ಮನೆಯಿಂದ ಎಷ್ಟು ದೂರ ಇದೆ ಎಂದರೆ ನ್ಯಾಯಾಲಯದಿಂದ ನ್ಯಾಯಾಲಯದ ಗೇಟಿನ ತನಕ. ನಮ್ಮ ಮನೆಯಿಂದ ಯಾರಾದರೂ ಕೂಗಿ ಕರೆದರೆ ಮತ್ತು ವಾಹನ ಬಂದರೆ ತೋಡಿಗೆ ಕೇಳುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾಯಿ ಬೊಗಳಿದರೆ ಕೇಳುತ್ತದೆ. ತೋಡಿನಿಂದ ಅಂದಾಜು ಬೆಳಿಗ್ಗೆ 11.30 ಗಂಟೆಗೆ ವಾಪಸ್ಸು ಮನೆಗೆ ಬಂದಿರುತ್ತೇನೆ.

7. ತೋಡು ನಮ್ಮ ಮನೆಯ ಪಕ್ಕದಲ್ಲಿ ಇದೆ ದೂರ ಇಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಂಟಾಡಿಯಿಂದ ಕಟೀಲು ಕಿನ್ನಿಗೋಳಿಗೆ ಹೋಗಿ ಬರಲು 3 ಗಂಟೆ ಬೇಕಾಗುತ್ತದೆ. ನಮ್ಮ ಮನೆಯ ಚಿಲಕ ಹಿತ್ತಾಳೆದ್ದು. ಹಿತ್ತಾಳೆ ಚಿಲಕವನ್ನು ಒಡೆಯಲು ಬಲವಾಗಿ ಪೆಟ್ಟು ಕೊಡಬೇಕು ಎಂದರೆ ನನಗೆ ಹೇಳಲು ಆಗುವುದಿಲ್ಲ, ಯಾಕೆಂದರೆ ನಾನು ನೋಡಿರುವುದಿಲ್ಲ. ಸಾಮಾನ್ಯವಾಗಿ ಬಾಗಿಲು ಚಿಲಕ ಒಡೆಯುವಾಗ ಜೋರು ಶಬ್ದ ಕೇಳಿ ಬರುತ್ತದೆ, ಆದರೆ ತೋಡಿನಲ್ಲಿ ನೀರು ಹರಿಯುತ್ತಿದ್ದ ಕಾರಣ ಆ ಶಬ್ದ ನನಗೆ ಕೇಳಿಸಿರುವುದಿಲ್ಲ. ನಮ್ಮ ಮನೆಯ ಮುಖ್ಯ ದ್ವಾರ ಪಳ್ಳಿ ಕಾರ್ಕಳ ಮುಖ್ಯ ರಸ್ತೆ ಕಡೆಗೆ ಇದೆ ಎಂದರೆ ಸರಿ. ಅಲ್ಲಿ ವಾಹನ ಮತ್ತು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ.

8. ದಿ:20.07.2021 ರಂದು ನಾನು ಪೊಲೀಸರಿಗೆ ದೂರು ನೀಡುವಾಗ ನಮ್ಮ ಮನೆಯಲ್ಲಿ ಯಾವುದೆಲ್ಲ , ಚಿನ್ನಾಭರಣಗಳು ಕಳುವಾಗಿದೆ ಎಂದು ಖಚಿತಪಡಿಸಿಕೊಂಡು ದೂರು ನೀಡಿರುತ್ತೇನೆ. ಆ ಎಲ್ಲಾ ಚಿನ್ನಾಭರಣಗಳು ಒಂದೇ ಲಾಕರ್ ನಲ್ಲಿ ಇತ್ತು. ನಾನು ಮರುಹೇಳಿಕೆ ಕೊಡುವಾಗ ಆ ಪ್ರಕರಣದಲ್ಲಿ ಹೇಳಿದ ಎಲ್ಲಾ ಆಭರಣಗಳನ್ನು ಕಳುವಾಗಿರುವುದಿಲ್ಲ ಕೇವಲ 3 ಆಭರಣಗಳು ಕಳುವಾಗಿದೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಕಳ್ಳತನವನ್ನು ನಮ್ಮೊಳಗೆ ಮಾಡಿ ಆರೋಪಿಗಳನ್ನು ಈ ಪ್ರಕರಣದಲ್ಲಿ ಆರೋಪಿಗಳನ್ನು ನಾನು ಮತ್ತು ಪೊಲೀಸರು ಸೇರಿ ಸಿಲುಕಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುವುದಿಲ್ಲ. ನಾನು ನನ್ನ ಮೊದಲಿನ

ಹೇಳಿಕೆ ಮತ್ತು ಮರು ಹೇಳಿಕೆಯಲ್ಲಿ ದ್ವಂದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಎದುರು ಪೊಲೀಸರು ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮೂಾ ಮಾ--1 ಮತ್ತು 2 ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಚಾಸಾ-6 ಮತ್ತು 7 ನಮ್ಮ ಆತ್ಮೀಯವರು ಎಂದರೆ ಸರಿ. ನಾವು ಒಬ್ಬರಿಗೊಬ್ಬರು ಸಹಾಯ ಮಾಡುತ್ತೇವೆ.

9. ನಾನು ಹೇಳಿದಂತೆ ಯಾವುದೆ ಘಟನೆ ನಡೆದಿರುವುದಿಲ್ಲ, ಸ್ಥಳ ಮಹಜರು ಮಾಡಿರುವುದಿಲ್ಲ, ಯಾವುದೇ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ, ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ, ಪೊಲೀಸರಿಗೆ ಮರುಹೇಳಿಕೆ ನೀಡಿರುವುದಿಲ್ಲ, ಆರೋಪಿಗಳನ್ನು ಈ ಮುಂಚೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಯಾರಾದ್ದೊ ಬಂಗಾರವನ್ನು ತೋರಿಸಿ ಆರೋಪಿಗಳನ್ನು ಈ ಪ್ರಕರಣಕ್ಕೆ ಸಿಲುಕಿಸಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ